<u>ದಿನಾಂಕಃ 25-07-2022 ರಂದು ಪ್ರಮಾಣ ವಚನ ಭೋದಿಸಲಾಯಿತುಃ</u>

**<u>ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದ ಃ</u>**

ನನ್ನ ವಯಸ್ಸು 47 ವರುಷ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ವಕೀಲರ ಮೂಲಕ ಹೇಳಿ ಮಾಡಿಸಿರುತ್ತೇನೆ. ನನ್ನ ತಂದೆಗೆ ನಾವು 4 ಜನ ಹೆಣ್ಣು ಮಕ್ಕಳು. ನನ್ನ ಮದುವೆಯಾಗಿ 17 ವರುಷ ಆಗಿರುತ್ತದೆ. ದಾವಾ ಸ್ವತ್ತು ಪ್ರತಿವಾದಿಗೆ ಆತನ ಒಟ್ಟು ಕುಟುಂಬದ ಸ್ವತ್ತು ಇದ್ದು, ಆತನ ಭಾಗಾಂಶ ಬಂದಿದೆ. ಪ್ರತಿವಾದಿ ನನ್ನ ತಮ್ಮ. ದಾವಾ ಸ್ವತ್ತಿಗೂ ನನಗೂ ಸಂಬಂಧ ಇದೆಯಾ ಇದೆ ಎಂದರೆ ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಆಗಿದ್ದು, ನಂತರ ನಾನು ಪ್ರತಿವಾದಿಗೆ ದುಡ್ಡು ಕೊಟ್ಟು ಖರೀದಿ ಮಾಡಿರುವ ಉದ್ದೇಶದಿಂದ ದಾವಾ ಸ್ವತ್ತಿಗೂ ನನಗೂ ಸಂಬಂಧ ಇದೆ. ದಾವಾ ಸ್ವತ್ತಿನ ಚಕ್ಕುಬಂಧಿ ಉ- ವೇಣುಗೋಪಾಲರೆಡ್ಡಿ ಸ್ವತ್ತು, ದ- ತಮಿಳುನಾಡಿನ ಗಡಿ, ಪೂ- ವೇಣುಗೋಪಾಲರೆಡ್ಡಿ ಸ್ವತ್ತು, ಪ- ರಸ್ತೆ ಇರುತ್ತದೆ.

ನನ್ನ ಗಂಡನಿಗೂ ಹಾಗೂ ನನ್ನ ತಮ್ಮನಿಗೂ ಸಂಬಂಧ ನನ್ನ ಗಂಡ ಮೃತಪಡುವವರೆಗೂ ಚೆನ್ನಾಗಿ ಇತ್ತು. ನನ್ನ ಗಂಡ ಹಾಗೂ ನನ್ನ ತಮ್ಮ-ಪ್ರತಿವಾದಿ ಬೇರೆ ಯಾವುದೇ ವ್ಯವಹಾರ ನಡೆದಿಲ್ಲ, ಈ ಕೇಸಿನದು ಮಾತ್ರ ಆಗಿರುತ್ತದೆ. ನನ್ನ ಗಂಡ ಸರ್ಜಾಪುರದಲ್ಲಿ ಯಾವುದೋ ಪ್ರಾಪರ್ಟಿಯಲ್ಲಿ ವಾಚ್‌ಮೆನ್ ಆಗಿ 20 ವರುಷದಿಂದ ಮದುವೆಗೆ ಮುನ್ನದಿಂದಲೂ ಕೆಲಸ ಮಾಡುತ್ತಿದ್ದರು. ನನ್ನ ಗಂಡನಿಗೆ ತಿಂಗಳಿಗೆ 10 ಸಾವಿರ ರೂ. ಆದಾಯ ಇತ್ತು. ಪ್ರತಿವಾದಿ ಕ್ರಯದ ಕರಾರು ಆಗುವ 1 ವಾರದ ಮುನ್ನ ತನಗೆ ಹಣದ ಅವಶ್ಯಕತೆ

ಇದೆ ಎಂದು ಹೇಳಿರುತ್ತಾರೆ, ಸದರಿ ವಿಚಾರವನ್ನು ನನ್ನ ತಮ್ಮ ನಮ್ಮ ಮನೆಗೆ ಸರ್ಜಾಪುರದ ಬಾಲಾಜಿ, ಮಾಲೂರಿನ ಎಂ. ಎನ್. ಗಿರೀಶ್‌ರವರನ್ನು ಕರೆದುಕೊಂಡು ಬಂದು ನಮಗೆ ಹೇಳಿರುತ್ತಾರೆ. ನನ್ನ ತಮ್ಮನೇ ದಾವಾ ಸ್ವತ್ತಿನ ಬಳಿ ಕರೆದುಕೊಂಡು ಹೋಗಿ ಅಲ್ಲಿ ನನ್ನ ಗಂಡ , ನನ್ನ ತಮ್ಮ , ಬಾಲಾಜಿ , ನಾನು ಮತ್ತು ಎಂ. ಎನ್. ಗಿರೀಶ್‌ರವರ ಸಮಕ್ಷಮದಲ್ಲಿ ಕ್ರಯದ ವ್ಯವಹಾರ ನಡೆಯಿತು. ಪ್ರತಿವಾದಿ-ನನ್ನ ತಮ್ಮ ಆತನ ಬೈಕಿನಲ್ಲಿ ಹಾಗೂ ನಾನು ನನ್ನ ಗಂಡ ನಮ್ಮ ಬೈಕಿನಲ್ಲಿ ಹೋದೆವು.

ದಾವಾ ಸ್ವತ್ತಿನ ಸ.ನಂ 130/5ರಲ್ಲಿ ಆರೂವರೆ ಗುಂಟೆ ಸ.ನಂ. 130/6ರಲ್ಲಿ 18 ಗುಂಟೆ, ಸ.ನಂ. 132/23ರಲ್ಲಿ 17ವರೆ ಗುಂಟೆ, ಒಟ್ಟು 1 ಎಕರೆ 7 ಗುಂಟೆ ಇರುತ್ತದೆ. ಪ್ರತಿವಾದಿಯ ದಾವಾ ಸ್ವತ್ತಿನ ಬೆಲೆಯನ್ನು 16-17 ಲಕ್ಷ ರೂ.ಗೆ ಮಾರಾಟ ಮಾಡುವುದಾಗಿ ಹೇಳಿದನು. ನಾವು ಅದಕ್ಕೆ 12-13 ಲಕ್ಷ ರೂ.ಗೆ ಕೇಳಿದೆವು. ನಮ್ಮ ಮನೆ ಸರ್ಜಾಪುರದಿಂದ ನನ್ನ ತಮ್ಮ, ನನ್ನ ಗಂಡ, ನಾನು ಮತ್ತು ಸಾಕ್ಷಿದಾರರು ನಮ್ಮ ಮನೆಯಿಂದ ಹೊರಟಾಗ ಬೆಳಿಗ್ಗೆ 11 ಗಂಟೆ ಮತ್ತು ದಾವಾ ಸ್ವತ್ತನ್ನು ತಲುಪಿದಾಗ 12 ಗಂಟೆ ಆಗಿರುತ್ತದೆ. ನಮ್ಮ ಮನೆಯಿಂದ ದಾವಾ ಸ್ವತ್ತಿಗೆ ಎಷ್ಟು ದೂರ ಇದೆ ಎಂದು ನಾನು ಲೆಕ್ಕಾಚಾರ ಹಾಕಿಲ್ಲ. ಜಮೀನನ್ನು ನೋಡಿ ವ್ಯವಹಾರ ಮುಗಿಸುವಷ್ಟರಲ್ಲಿ ಸಮಯ ಮದ್ಯಾಹ್ನ 1-1.30 ತೆಗೆದುಕೊಂಡಿತ್ತು. ಸದರಿ ಬಂಡಹಳ್ಳಿ ಗ್ರಾಮದಿಂದ ಮಾಲೂರಿಗೆ ಬಂದಿರುತ್ತೇವೆ, ಆಗ ಸಮಯ 2 ಗಂಟೆ ಆಗಿರುತ್ತದೆ.

ಮಾಲೂರಿಗೆ ಬಂದು ಪತ್ರ ಬರಹಗಾರ- ಬಿ.ವಿ. ಸತ್ಯನಾರಾಯಣರವರ ಬಳಿ ನನ್ನ ತಮ್ಮ ಕರೆದುಕೊಂಡು ಹೋಗಿರುತ್ತಾನೆ. ಸದರಿ ಪತ್ರ ಬರಹಗಾರ ನನ್ನ ತಮ್ಮನಿಗೆ ಪರಿಚಯ ಇರುತ್ತಾರೆ.

**ಮುಂದುವರಿದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಗಿದೆಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)**

ಓ.ಹೇ ಕೇ ಸರಿ ಇದೆ.

SD/-

**(ಲತಾದೇವಿ ಜಿ.ಎ)**
ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಲೂರು.